1	2	3
4	ಸಂಪಿಗೆ	89
5	ಸಂಪಿಗೆ ಹೊಸಹಳ್ಳಿ	240
6	ಕೊಂಡಜ್ಜಿ	212
7	ಲೋಕಮ್ಮನಹಳ್ಳಿ	195
8	ಅನೇಕೆರೆ	133
9	ಮೂನಿಯೂರು	195
10	ತಾಳಕೆರೆ	207
11	ವಡವನಗಟ್ಟ	30[illegible]
12	ಮಾದಿಹಳ್ಳಿ	186
13	ಕೊಡಗೀಹಳ್ಳಿ	245
14	ತಂಡಗ	262
15	ಗೋಣಿತುಮಕೂರು	128
16	ದಬ್ಬೇಘಟ್ಟ	265
17	ಮುತ್ತುಗಹಳ್ಳಿ	163
18	ಮಾವಿನಕೆರೆ	135
19	ಸೊರವನಹಳ್ಳಿ	142
20	ಮಣಿಚಿಂಡೂರು	213
21	ಹುಲ್ಲೇಕೆರೆ	60
22	ಕಣತೂರು	47
23	ಬೈತರಹೊಸಹಳ್ಳಿ	165
24	ಶೆಟ್ಟಗೊಂಡನಹಳ್ಳಿ	178
25	ಮಾಯಸಂದ್ರ	265
	ಒಟ್ಟು	4550

ಆ) 2002-03 ರಲ್ಲಿ ತುರುವೇಕೆರೆ ತಾಲ್ಲೂಕಿಗೆ ಈ ಕೆಳಗಿನಂತೆ ವಸತಿ ಗುರಿಯನ್ನು ನೀಡಿದೆ

ಕ್ರ.ಸಂ	ಯೋಜನೆ	ಗುರಿ
1	ಗ್ರಾಮೀಣ ಆಶ್ರಯ	330
2	ನವಗ್ರಾಮ ಆಶ್ರಯ ವಸತಿ ಯೋಜನೆ	240
3	ಗ್ರಾಮೀಣ ಅಂಬೇಡ್ಕರ್	41
	ಒಟ್ಟು	611

ಇ) ಆ ಗೆ ಉತ್ತರ ನೀಡಿರುವ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಪ್ರೇರಕ, ಉಪ ಪ್ರೇರಕರ ಹಾಗೂ ಗ್ರಂಥಪಾಲಕರ ಸಂಭಾವನೆ ಹೆಚ್ಚಿಸುವುದು

285 (413) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) - ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂದುವರಿಕೆ ಕಲಿಕಾ ಕೇಂದ್ರಗಳಲ್ಲಿ ಪ್ರೇರಕ, ಉಪ ಪ್ರೇರಕ ಹಾಗೂ ಗ್ರಂಥಪಾಲಕರಿಗೆ ಕೊಡುತ್ತಿರುವ ಸಂಭಾವನೆ ಎಷ್ಟು ; (ವಿವರ ಕೊಡುವುದು) ;

ಆ) ಹಾಗಿದ್ದಲ್ಲಿ, ಸರ್ಕಾರದ ಮಾನದಂಡ ಪ್ರಕಾರ ಇದು ಜೀವನ ನಡೆಸಲು ಸಾಕಾಗುವುದೆ;

ಇ) ಸಂಭಾವನೆಯನ್ನು ತಕ್ಷಣ ಹೆಚ್ಚಿಸಿ ಅವರಿಗೆ ಅನುಕೂಲ ಮಾಡಲು ಸರ್ಕಾರ ಮುಂದಾಗುವುದೆ ;

ಈ) ಈ ವರ್ಷದ ಆಯವ್ಯಯದಲ್ಲಿ ಮಾಡಲಾಗುವುದೆ?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಮುಂದುವರಿಕೆ ಶಿಕ್ಷಣ ಕೇಂದ್ರಗಳಲ್ಲಿ ಸ್ವಯಂ ಸೇವಾ ನೆಲೆಯಲ್ಲಿ ಕೆಲಸ ಮಾಡುತ್ತಿರುವ ಪ್ರೇರಕರಿಗೆ ಮಾಸಿಕ ರೂ. 700.00 ಹಾಗೂ ಉಪ ಪ್ರೇರಕರಿಗೆ ಮಾಸಿಕ ರೂ. 500.00 ರೂ.ಗಳನ್ನು ಹಾಗೂ ನೋಡಲ್ ಮುಂದುವರಿಕೆ ಶಿಕ್ಷಣ ಕೇಂದ್ರದ ಪ್ರೇರಕರಿಗೆ ಮಾಸಿಕ ರೂ. 1,200 ಮತ್ತು ಉಪ ಪ್ರೇರಕರಿಗೆ ಮಾಸಿಕ ರೂ. 700 ಗೌರವಧನವನ್ನು ನೀಡಲಾಗುತ್ತಿದೆ. ಗ್ರಂಥಪಾಲಕರ ಕೆಲಸ ಪ್ರತ್ಯೇಕವಾಗಿ ನಿರ್ವಹಿಸುವುದು ಮುಂದುವರಿಕೆ ಶಿಕ್ಷಣ ಕಾರ್ಯಕ್ರಮದಲ್ಲಿ ಇರುವುದಿಲ್ಲ.

ಆ) ಸ್ವಯಂ ಸೇವಾ ನೆಲೆಯಲ್ಲಿ ಬಿಡುವಿನ ಸಮಯದಲ್ಲಿ ಪ್ರೇರಕವಾಗಿ ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು ನಡೆಸುವುದರಲ್ಲಿ ಪ್ರೇರಕರ ಕೆಲಸವು ಪೂರ್ಣಕಾಲಿಕವಾಗಿರುವುದಿಲ್ಲ.

ಇ) ಮುಂದುವರಿಕೆ ಶಿಕ್ಷಣ ಕಾರ್ಯಕ್ರಮವನ್ನು ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರದ ಮಾರ್ಗಸೂಚಿಯಂತೆ ಜಾರಿಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮವು ಕೇಂದ್ರ ಮತ್ತು ರಾಜ್ಯ ಸರ್ಕಾರ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು 5 ವರ್ಷ ಕಾಲಮಿತಿ ಕಾರ್ಯಕ್ರಮವಾಗಿದೆ. ಮೊದಲು ಮೂರು ವರ್ಷಗಳ ಶೇ. 100 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ. ಉಳಿದ 2 ವರ್ಷಗಳ ಅನುದಾನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇ. 50 ರಷ್ಟು ಭರಿಸುತ್ತದೆ. ಆದ್ದರಿಂದ ಗೌರವಧನ ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಈ) ಕೇಂದ್ರ ಸರ್ಕಾರದ ತೀರ್ಮಾನವನ್ನಾಧರಿಸಿ ನಿರ್ಧರಿಸಲಾಗುವುದು.

ತುರುವೇಕೆರೆ ತಾಲ್ಲೂಕು ಸಂಪಿಗೆ ಗ್ರಾಮದಲ್ಲಿ ಬಿ.ಎಂ.ಶ್ರೀ ಭವನಕ್ಕೆ ಹಣ ಮಂಜೂರು

286 (414) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) - ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಸಂಪಿಗೆ ಗ್ರಾಮದ ಬಿ.ಎಂ.ಶ್ರೀ ಭವನಕ್ಕೆ ಹಣ ಕೊಡುವುದಾಗಿ ಮಂತ್ರಿಗಳು ಸದನದಲ್ಲಿ ಹೇಳಿದ್ದರೂ ಇದುವರೆಗೆ ಹಣ ಬಿಡುಗಡೆ ಮಾಡದಿರಲು ಕಾರಣವೇನು;

ಆ) ಬಿ.ಎಂ.ಶ್ರೀ ಭವನ ನಿರ್ಮಾಣಕ್ಕೆ ಇರುವ ತೊಂದರೆ ಏನು ;

ಇ) ಎಷ್ಟು ದಿವಸದಲ್ಲಿ ಕಟ್ಟಡ ಪ್ರಾರಂಭ ಮಾಡಲಾಗುವುದು ?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು)

ಅ) ತುರುವೇಕೆರೆ ತಾಲ್ಲೂಕಿನ ಸಂಪಿಗೆ ಗ್ರಾಮದ ಬಿ.ಎಂ.ಶ್ರೀ ಭವನಕ್ಕೆ ಹಣ ಬಿಡುಗಡೆ ಮಾಡಲು ಪರಿಶೀಲಿಸಲಾಗುವುದೆಂದು ತಿಳಿಸಲಾಗಿತ್ತು. ಪರಿಶೀಲಿಸಲಾಗಿ ಬೆಂಗಳೂರಿನಲ್ಲಿರುವ